# ಇದಿರ್ಯಾರೊ ಗುರುವೆ ಸಮರ್ಯಾರೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
4. **Note:** Lyrics mentioned are as per Ref. 2. The wordings in Ref. 1 are same as in Ref. 2. Lyrics in Ref. 3 are similar to Ref. 1.
5. **Note:** Singer has followed lyrics as in Ref. 2.

ರಾಗ: ಆನಂದ ಭೈರವಿ ತಾಳ: ಏಕ

ಇದಿರ್ಯಾರೊ ಗುರುವೆ ಸಮರ್ಯಾರೊ || ಪ ||
ಮದನಜನಕ ಪ್ರಿಯ ಗುರು ಮಧ್ವರಾಯ || ಅಪ ||

ಸನ್ನುತ ಮಹಿಮ ಪ್ರಸನ್ನ ವದನ ನಿನ-
ಗನ್ಯನಲ್ಲವೋ ನೀ ಎನ್ನ ರಕ್ಷಿಸಬೇಕೋ
ನಿನ್ನ ನೋಡಿದವರು ಧನ್ಯರಾಗುವರು
ಎನ್ನ ದಯಾಮೂರ್ತಿ ಮನ್ನಿಸಿ ನೋಡೊ || 1 ||

ದುರ್ಜನರನು ಗರ್ಜನದಿಂದ ಓಡಿಸಿ
ಸಜ್ಜನರನು ಸಂರಕ್ಷಿಸಿದಾತನೆ
ಈ ಜಗದಲ್ಲಿ ಮಧ್ಯಗೇಹರ ಪತ್ನಿಯ
ಪೂಜ್ಯ ಜಠರದಲಿ ಜನಿಸಿದ ಧೀರ || 2 ||

ವೇದ ಶಾಸ್ತ್ರಗಳಿಂದ ಮಾಯಿಗಳ ಖಂಡಿಸಿ
ಸಾಧಿಸಿ ಹರಿಯೆ ಸರ್ವೋತ್ತಮನೆಂತೆಂದು
ಮೋದ ಭರಿತವಾದ ದಿವ್ಯ ಶಾಸ್ತ್ರವ ಮಾಡ್ದ
ಮೋದತೀರ್ಥ ಪುರಂದರ ವಿಠಲ ದಾಸ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಇದಿರ್ಯಾರೋ –** ನಿನ್ನ ಮುಂದೆ ನಿಲ್ಲಬಲ್ಲವರು ಯಾರು; ನಿನಗೆ ಯಾರೂ ಎಣೆಯಿಲ್ಲ, ಸರಿಸಾಟಿಯಿಲ್ಲ.

**ಮದನಜನಕ ಪ್ರಿಯ – ಮಾರಜನಕ ಪ್ರಿಯ –** ಮನ್ಮಥನ ತಂದೆಯಾದ ನಾರಾಯಣನಿಗೆ ಪ್ರಿಯನಾದವನೇ.

**ನಿನಗನ್ಯನಲ್ಲ –** ನೀನು ನನ್ನ ಮುಖ್ಯಪ್ರಾಣನಾಗಿ ನನ್ನೊಳಗೇ ಇರುವೆಯಾದ್ದರಿಂದ ನಾನು ನಿನಗೆ ಬೇರೆಯವನಲ್ಲ; ನಿನ್ನ ಆಶ್ರಿತನೇ.

**ಮನ್ನಿಸಿ –** ನಿನ್ನವನೆಂಬ ಅಭಿಮಾನದಿಂದ.

**ಮಧ್ಯಗೇಹರ ಪತ್ನಿಯ –** ಶಿವಬೆಳ್ಳಿ (ರೌಪ್ಯಪೀಠ) ಎಂಬ ಗ್ರಾಮದಲ್ಲಿ ಪಾಜಕ ವೆಂಬೆಡೆಯಲ್ಲಿ ನಡ್ಡಂತಿಲ್ಲಾಯವೆಂಬ ತುಳುಮನೆತನಕ್ಕೆ ಸೇರಿದ ಬ್ರಾಹ್ಮಣನ ಮಗನಾಗಿ ಮಧ್ವಾಚಾರ್ಯರು ಹುಟ್ಟಿದರು. ನಡ್ಡಂತಿಲ್ಲಾಯ ಎಂಬ ತುಳು ಮಾತನ್ನು ಸಂಸ್ಕೃತದಲ್ಲಿ 'ಮಧ್ಯಗೇಹ'ವೆಂದು ಮಾಡಿದ್ದಾರೆ. ಇದು ವ್ಯಕ್ತಿನಾಮವಲ್ಲ, ಕುಲನಾಮ. ಇವರ ದಿಟವಾದ ಹೆಸರೇನೋ ತಿಳಿಯದು.

**ಮಾಯಿಗಳ –** ಮಾಯಾವಾದವನ್ನು ಹಿಡಿದವರ.

**ಮೋದತೀರ್ಥ –** ಮಧ್ವಾಚಾರ್ಯರಿಗೆ 'ಆನಂದತೀರ್ಥ'ರೆಂದೂ ಹೆಸರಿದೆ; ಇಲ್ಲಿನ ಆನಂದವನ್ನು ಮೋದವೆಂದು ಪರ್ಯಾಯವಾಗಿ ಒಕ್ಕಣಿಸಿದ್ದಾರೆ.

**ದಿವ್ಯ ಶಾಸ್ತ್ರ** = ದ್ವೈತ ಶಾಸ್ತ್ರ

**Classification:** Keerthane
**Ankita:** purandara vittala
**Location:** NA
**Category:** Hanuma Stuti, Madhwacharya Stuti
**Sub-Category:** hanuma, hanuma-bhima-madhva, bhima, madhva, madhwacharya, Krishna, dhanya, daya, jana, loka, patni, veda, shastra, divya, hari sarvottama,
**Pravachana:** NA
**Explanation:** NA